## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊಸದುರ್ಗ.

## ಕ್ರಿಮಿನಲ್ ಮೊಕದ್ದಮೆ ಸಂಖ್ಯೆಃ 1380/2021

**ಪಿಡಬ್ಲ್ಯೂ-1**
**ಸಿಡಬ್ಲ್ಯೂ-4**

**ಸಾಕ್ಷಿಗೆ ದಿನಾಂಕ 07-02-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಸಾಕ್ಷಿಯ ಹೆಸರು | ಃ ಹನುಮಂತಪ್ಪ ಬಿ |
| ತಂದೆಯ ಹೆಸರು | ಃ ಬಸಪ್ಪ |
| ವಯಸ್ಸು | ಃ 41 ವರ್ಷ |
| ಉದ್ಯೋಗ | ಃ ಅಬಕಾರಿ ಮುಖ್ಯ ಪೇದೆ, ಚಿಕ್ಕನಾಯಕನಹಳ್ಳಿ ವಲಯ |
| ವಾಸಸ್ಥಳ | ಃ ಚಿಕ್ಕನಾಯಕನಹಳ್ಳಿ |

**ಮುಖ್ಯವಿಚಾರಣೆ ಮಾನ್ಯ ಸ.ಸ.ಅ ರವರಿಂದ**

ನಾನು ದಿಃ06-09-2013 ರಿಂದ 05-02-2024 ರವರೆಗೆ ಹೊಸದುರ್ಗ ಅಬಕಾರಿ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 25-05-2021 ರಂದು ನಾನು ಚಾ.ಸಾ-1 ರವರೊಂದಿಗೆ ಬೆಳಗ್ಗೆ ಸುಮಾರು 10-20 ಗಂಟೆ ಸಮಯದಲ್ಲಿ ಮತ್ತೋಡು ಮಾರ್ಗದಲ್ಲಿ ಗಸ್ತು ಕಾರ್ಯ ನಡೆಸುತ್ತಿದ್ದಾಗ ಗಿರಿಯಾಪುರದ ಗ್ರಾಮದಲ್ಲಿ ಇದ್ದಾಗ ಚಾ.ಸಾ-1 ರವರಿಗೆ ಲಕ್ಷ್ಮೀದೇವರಹಳ್ಳಿ ಗ್ರಾಮದ ನಾಗಭೂಷಣ್ ತಂದೆ ರಾಮಪ್ಪ ಎಂಬಾತನು ತನ್ನ ಮನೆಯಲ್ಲಿ ಅಕ್ರಮವಾಗಿ ಮದ್ಯವನ್ನು ಹೊಂದಿ ಮಾರಾಟ ಮಾಡುತ್ತಿದ್ದಾನೆ ಎಂದು ಬಂದ ಬಾತ್ಮಿಯ ಮೇರೆಗೆ ನಾವುಗಳು ಸದರಿ ಗ್ರಾಮಕ್ಕೆ ತೆರಳಿ ಗ್ರಾಮದ ತಿರುವು ರಸ್ತೆಯಲ್ಲಿ ನಿಂತಿದ್ದ ಚಾಸಾ-2 ಮತ್ತು 3 ರವರನ್ನು ಬರಮಾಡಿಕೊಂಡು ಅವರಿಗೆ ವಿಷಯ ತಿಳಿಸಿ ದಾಳಿ ಸಮಯದಲ್ಲಿ ಸಹಕರಿಸುವಂತೆ ಕೋರಿ ಅವರಿಗೆ ಮನವಿ ಪತ್ರವನ್ನು ನೀಡಿ ಅದಕ್ಕೆ ಅವರು ಒಪ್ಪಿ ನಮ್ಮೊಂದಿಗೆ ಬಂದಿರುತ್ತಾರೆ.

ನಂತರ ನಾವು ಸರ್ಕಾರಿ ವಾಹನವದಲ್ಲಿ ವಾಹನ ಸಂಖ್ಯೆಃಕೆಎ-16-ಜಿ-0799 ಟಾಟಾ ಬೋಲೆರೋ ವಾಹನದಲ್ಲಿ ಮಾಹಿತಿ ಬಂದ ಸ್ಥಳಕ್ಕೆ ಹೋಗಿ ನಾಗಭೂಷಣ್ ಮನೆಯ ಹತ್ತಿರ ಹೋಗಿ ನೋಡಿದಾಗ ಸಮವಸ್ತ್ರದಲ್ಲಿದ್ದ ನಮ್ಮನ್ನು ನೋಡಿ ಒಬ್ಬ ವ್ಯಕ್ತಿ ಅಲ್ಲಿಂದ

ಓಡಿಹೋದನು. ಆತನನ್ನು ಹಿಡಿಯಲು ಪ್ರಯತ್ನಿಸಿದರು ಸಿಗಲಿಲ್ಲ. ನಂತರ ಬಾತ್ಮಿ ಮನೆ ಇದೇ ಎಂದು ಖಚಿತ ಪಡಿಸಿಕೊಂಡು ಹತ್ತಿರ ಬಂದಾಗ ಓರ್ವ ಮಹಿಳೆ ಮನೆಯ ಮುಂದೆ ನಿಂತಿದ್ದು ಹೆಸರು ವಿಳಾಸ ಕೇಳಲಾಗಿ ಕವಿತಾ ಕೋಂ ನಾಗಭೂಷಣ್ ಎಂದು ತಿಳಿಸಿ ಓಡಿಹೋದ ತನ್ನ ಪತಿ ನಾಗಭೂಷಣ್ ತಂದೆ ರಾಮಪ್ಪ, 47 ವರ್ಷ ಎಂದು ತಿಳಿಸಿದರು. ನಂತರ ಆಕೆಗೆ ಬಂದ ಮಾಹಿತಿ ತಿಳಿಸಿ ಮನೆಯನ್ನು ಶೋಧಿಸಲಾಗುವುದು ಎಂದು ತಿಳಿಸಿ ಮಾನ್ಯ ನ್ಯಾಯಾಲಯದಿಂದ ಶೋಧನಾ ವಾರೆಂಟ್ ಪಡೆಯಲು ಸಾಧ್ಯವಾಗದ ಕಾರಣ ಸ್ಥಳದಲ್ಲಿಯೇ ಶೋಧನಾ ಸಮುಚಿತ ಆಧಾರವನ್ನು ತಯಾರಿಸಿ ಪರಸ್ಪರ ಅಂಗಶೋಧನೆ ಮಾಡಿಕೊಂಡು ಮನೆಯನ್ನು ಪ್ರವೇಶಿಸಿ ಶೋಧಿಸಿದಾಗ ಮನೆಯ ಅಡುಗೆ ಕೋಣೆಯ ಮೂಲೆಯಲ್ಲಿ ಒಂದು ಬಿಳಿಯ ಪ್ಲಾಸ್ಟಿಕ್ ಚೀಲ ಇರುವುದು ಕಂಡುಬಂದಿತು. ಅನುಮಾನಗೊಂಡು ಅದನ್ನು ಪಂಚರ ಸಮಕ್ಷಮ ತೆಗೆದು ನೋಡಲಾಗಿ ಮದ್ಯ ತುಂಬಿದ ಟೆಟ್ರಾ ಪ್ಯಾಕುಗಳು ಇರುವುದು ಕಂಡುಬಂದಿತು. ಅವುಗಳನ್ನು ಎಣಿಸಿ ನೋಡಲಾಗಿ 90 ಎಂ ಎಲ್ ನ 47 ರಾಜಾ ವಿಸ್ಕಿಯ ಟೆಟ್ರಾ ಪ್ಯಾಕುಗಳು ಹಾಗೂ 180 ಎಂ.ಎಲ್ ನ 3 ಒ.ಟಿ ಟೆಟ್ರಾ ಪ್ಯಾಕುಗಳು ಕಂಡುಬಂದಿದ್ದು ಅವುಗಳಿಂದ ಒಟ್ಟು 4.770 ಮದ್ಯ ಇರುತ್ತದೆ ಹಾಗೂ ಅದಕ್ಕೆ ಯಾವುದಾದರೂ ಪರವಾನಗಿ ಇದೆಯೇ ಎಂದು ಕೇಳಲು ಸದರಿ ಮಹಿಳೆ ಇರುವುದಿಲ್ಲ ಎಂದು ತಿಳಿಸಿದರು. ನಂತರ ಸದರಿ ಕೃತ್ಯವು ಅಬಕಾರಿ ಕಾಯ್ದೆ ಅಡಿ ಶಿಕ್ಷಾರ್ಹ ಅಪರಾಧ ಎಂದು ತಿಳಿಸಿ ದೊರೆತ ಸ್ವತ್ತುಗಳ ಪೈಕಿ 90 ಎಂ ಎಲ್ ನ 24 ರಾಜಾ ವಿಸ್ಕಿಯ ಟೆಟ್ರಾ ಪ್ಯಾಕುಗಳು ಹಾಗೂ 180 ಎಂ.ಎಲ್ ನ 3 ಒ.ಟಿ ಟೆಟ್ರಾ ಪ್ಯಾಕುಗಳನ್ನು ರಾಸಾಯನಿಕ ವಿಶ್ಲೇಷಣೆಗಾಗಿ ಪ್ರತ್ಯೇಕವಾಗಿ ಮಾದರಿಗೆ ತೆಗೆದು ಬಿಳಿಯ ಚೀಲದಿಂದ ಸುತ್ತಿ ದಾರದಿಂದ ಕಟ್ಟಿ ಅರಗು ಸೀಲು ಕ್ರಮ ಜರುಗಿಸಲಾಯಿತು. ಸದರಿ ಮಹಜರ್ ಕ್ರಮವನ್ನು ಬೆಳಗ್ಗೆ 10-50 ರಿಂದ 11-50 ರವರೆಗೆ ಪಂಚರ ಸಮಕ್ಷಮ ಜರುಗಿಸಲಾಯಿತು.

ದಿಃ 14-06-2021 ರಂದು ರಾಸಾಯನಿಕ ಪರೀಕ್ಷಗಾಗಿ ಮಾದರಿಗಳನ್ನು ಚಿತ್ರದುರ್ಗದ ಪರೀಕ್ಷಾ ಕೇಂದ್ರಕ್ಕೆ ತೆಗೆದುಕೊಂಡು ಹೋಗಿ ಸ್ವೀಕೃತಿ ಪಡೆದುಕೊಂಡಿರುತ್ತೇನೆ. ದಿಃ30-06-2021 ರಂದು ರಾಸಾಯನಿಕ ವಿಶ್ಲೇಷಣಾ ವರದಿಯನ್ನು ಪಡೆದು ಹಾಜರು ಮಾಡಿರುತ್ತೇನೆ. ಈ ಕುರಿತು ದಿಃ27-08-2021 ರಂದು ಚಾ.ಸಾ-7 ರವರಿಗೆ ನನ್ನ ಹೇಳಿಕೆ ನೀಡಿರುತ್ತೇನೆ.

**ಸಾಕ್ಷಿಯು ಕತ್ಯ ಸ್ಥಳ ಮತ್ತು ಅಮಾನತ್ತು ಮಹಜರ್ ನೋಡಿ ಗುರುತಿಸಿದ್ದು, ಅದನ್ನು ನಿಪಿ-1 ಎಂದು ಗುರುತಿಸಲಾಯಿತು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಹೇಳಿಕೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-2 ಎಂದು ಗುರುತಿಸಲಾಯಿತು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ರಾಸಾಯನಿಕ ಪರೀಕ್ಷೆಗಾಗಿ ಮಾದರಿಗೆ ತೆಗೆದುಕೊಂಡು ಹೋದ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-3 ಎಂದು ಗುರುತಿಸಲಾಯಿತು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.**

**ಸಾಕ್ಷಿಯು ರಾಸಾಯನಿಕ ಪರೀಕ್ಷೆಗೆ ಮಾದರಿಗೆ ತೆಗೆದ ಟೆಟ್ರಾ ಪ್ಯಾಕುಗಳನ್ನು ನೋಡಿ ಗುರುತಿಸಿದ್ದು, ಅವುಗಳ ಪೈಕಿ 24 ರಾಜಾ ವಿಸ್ಕಿ ಟೆಟ್ರಾ ಪ್ಯಾಕ್ ಗಳನ್ನು ಒಟ್ಟಾಗಿ ಮುದ್ದೆ ಮಾಲು-1 ಎಂದು ಹಾಗೂ 3 ಒ.ಟಿ ವಿಸ್ಕಿ ಟೆಟ್ರಾ ಪ್ಯಾಕ್ ಗಳನ್ನು ಒಟ್ಟಾಗಿ ಮುದ್ದೆ ಮಾಲು-2 ಎಂದು ಗುರುತಿಸಲಾಯಿತು.** ಆ ದಿನ ದಾಳಿ ಸಮಯದಲ್ಲಿ ನಮ್ಮನ್ನು ನೋಡಿ ಓಡಿ ಹೋದ ವ್ಯಕ್ತಿಯನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ವ್ಯಕ್ತಿ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿ.

**<u>ಪಾಟೀ ಸವಾಲು ಆರೋಪಿ ಪರ ಶ್ರೀ ಎಸ್.ಎಂ ವಕೀಲರಿಂದಃ</u>**

1. ನಾವು ಮತ್ತೋಡು ಗ್ರಾಮಕ್ಕೆ ಹೊಸದುರ್ಗದಿಂದ ಕಾರೇಹಳ್ಳಿ-ಹಾಗಲಕೆರೆ ಹ್ಯಾಂಡ್ ಪೋಸ್ಟ್ ಮಾರ್ಗವಾಗಿ ಹೋದೆವು. ಹೊಸದುರ್ಗ ಪಟ್ಟಣದಿಂದ ಸುಮಾರು 9, 9-15 ಕ್ಕೆ ಹೊರಟೆವು. ಮತ್ತೋಡು ಗ್ರಾಮದಿಂದ ಗಿರಿಯಾಪುರಕ್ಕೆ ಲಕ್ಷ್ಮೀದೇವರಹಳ್ಳಿ-ದೊಡ್ಡಕರ್ಪೂರದ ಕಟ್ಟೆ ಮಾರ್ಗವಾಗಿ ಹೋದೆವು. ಮತ್ತೋಡು ನಿಂದ ಗಿರಿಯಾಪುರಕ್ಕೆ ಗುಡ್ಡದ ನೇರಲಕೆರೆ ಗ್ರಾಮದ ಹೊರಗಿನ ಮಾರ್ಗದಿಂದ ಹೋದೆವು. ಗುಡ್ಡದ ನೇರಲಕೆರೆ ಗ್ರಾಮದ ಒಳಗಿನ ರಸ್ತೆಯ ಮಾರ್ಗವಾಗಿ ಹೋಗಿರುವುದಿಲ್ಲ. ನಾವು ಮತ್ತೋಡು ಗ್ರಾಮದಿಂದ ಹೊರಟಾಗ ಸುಮಾರು 9-45, 9-50 ಆಗಿತ್ತು. ಗಿರಿಯಾಪುರ ಗ್ರಾಮಕ್ಕೆ ತಲುಪಿದಾಗ ಸಮಯ 10-10 ಆಗಿತ್ತು. ಚಾ.ಸಾ-1 ರವರಿಗೆ ಬಾತ್ಮಿ ಬಂದಾಗ ಸಮಯ 10 ಗಂಟೆ ಆಗಿತ್ತು. ಗಿರಿಯಾಪುರದಿಂದ ಲಕ್ಷ್ಮೀದೇವರಹಳ್ಳಿ ಗ್ರಾಮಕ್ಕೆ ನೇರವಾಗಿ 2.50-3 ಕಿ.ಮೀ ಇರುತ್ತದೆ. ಗಿರಿಯಾಪುರದಿಂದ ನಾವು ಬಲಗಡೆ ದಿಕ್ಕಿಗೆ ತಿರುಗಿದೆವು. ಗಿರಿಯಾಪುರದಿಂದ

ದೊಡ್ಡಕರ್ಪೂರದ ಕಟ್ಟೆಯಿಂದ ಬಲಗಡೆ ಯಾವುದೇ ತಿರುವು ಇರುವುದಿಲ್ಲ ಎಂದರೆ ಸರಿಯಲ್ಲ.

2. ಆರೋಪಿ ಮನೆಗೆ ಹೋದಾಗ ಸುಮಾರು ಸಮಯ 10-20 ಆಗಿತ್ತು. ಆರೋಪಿಯು ನೇರಳೆ ಬಣ್ಣದ ಷರ್ಟ್ ಹಾಗೂ ಬಿಳಿ ಬಣ್ಣದ ಪಂಚೆ ಧರಿಸಿದ್ದರು. ನಾನು ನನ್ನ ಹೇಳಿಕೆಯಲ್ಲಿ ಆರೋಪಿಯು ಧರಿಸಿದ ಧಿರಿಸಿನ ಬಗ್ಗ ಹೇಳಿರುವುದಿಲ್ಲ. ಆರೋಪಿಯು ಪೂರ್ವಾಭಿಮುಖವಾಗಿ ಬೊಮ್ಮಲಿಂಗಪ್ಪನ ಮನೆಯ ಕಡೆಯಿಂದ ಗ್ರಾಮದ ಕಡೆಗೆ ಓಡಿ ಹೋದರು. ಆರೋಪಿಯ ಮನೆ ಗ್ರಾಮಕ್ಕೆ ಹೊಂದಿಕೊಂಡಿರುವ ಜಮೀನಿನಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಆರೋಪಿಯನ್ನು ನಾವು ಸುಮಾರು 100-150 ಮೀ ಹಿಂಬಾಲಿಸಿ ಓಡಿದೆವು. ವಶಪಡಿಸಿಕೊಂಡ ಟೆಟ್ರಾ ಪ್ಯಾಕುಗಳ ಬ್ಯಾಚ್ ನಂಬರ್ ಪರಿಶೀಲನೆ ಮಾಡಿರುತ್ತೇವೆ. ಆರೋಪಿಯ ಮನೆಯಲ್ಲಿ ನಾನು ಹೇಳಿದಂತೆ ಯಾವುದೆ ಟೆಟ್ರಾ ಪ್ಯಾಕುಗಳು ದೊರೆತಿರುವುದಿಲ್ಲ ಎಂದರೆ ಸರಿಯಲ್ಲ. ಚಾ.ಸಾ-2 ಮತ್ತು 3 ಶ್ರೀರಾಂಪುರ ಗ್ರಾಮದವರಾಗಿದ್ದು ಲಕ್ಷ್ಮೀದೇವರಹಳ್ಳಿ ಗೇಟ್ ನಲ್ಲಿ ನಿಂತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾ.ಸಾ-2 ಮತ್ತು 3 ಹೊಸದುರ್ಗ ಪಟ್ಟಣದಲ್ಲಿ ಆಟೋ ಚಾಲಕರಾಗಿ ಕೆಲಸ ಮಾಡುತ್ತಾರೆ ಎಂದರೆ ಸರಿಯಲ್ಲ. ಆರೋಪಿ ಟ್ರಾಕ್ಟರ್ ಮತ್ತು ಬೋಲೆರೋ ವಾಹನದಲ್ಲಿ ಬೇರೆ ಊರಿಗೆ ಹೋಗುತ್ತಾರೆ, ಆದ್ದರಿಂದ ಮನೆಯಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ.

3. ನಾವು ಆರೋಪಿಯ ಮನೆ ಹತ್ತಿರ ಹೋಗಿರುವುದಿಲ್ಲ ಮತ್ತು ಶೋಧನಾ ವಾರೆಂಟ್ ತಯಾರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಮನೆಯನ್ನು ದಾಳಿ ಮಾಡಿ ಮದ್ಯ ವಶಪಡಿಸಿಕೊಂಡೆವು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ರಾಸಾಯನಿಕ ಪರೀಕ್ಷೆಗಾಗಿ ಮಾದರಿಗೆ ಪ್ರತ್ಯೇಕವಾಗಿ ತೆಗೆದೆವು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನಾವು ಸ್ಥಳದಲ್ಲಿ ಮಹಜರ್ ಕ್ರಮ ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾವು ಎಲ್ಲಾ ದಾಖಲೆಗಳನ್ನು ಕಚೇರಿಯಲ್ಲಿ ಸೃಷ್ಠಿಸಿ ಇಲಾಖಾ ಅಂಕಿಅಂಶಗಳಿಗೋಸ್ಕರ ಮೇಲಾಧಿಕಾರಿಗಳ ಒತ್ತಡದ ಮೇರೆಗೆ ಆರೋಪಿಯ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಮತ್ತು ಮುದ್ದೆ ಮಾಲುಗಳಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ ಅದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಹೊಸದುರ್ಗ.